# ನಿರರ್ಥಕ ಮುಷ್ಕರ

ಐ.ಟಿ ವಲಯದ ನೌಕರರು ಮುಷ್ಕರದ ದಿನ ಮನೆಯಲ್ಲೇ ಕುಳಿತು ಕೆಲಸ ಮಾಡಿದರು. ಅದೇ ಗಾರ್ಮೆಂಟ್ ಉದ್ಯಮ ಬಾಗಿಲು ಮುಚ್ಚಿದ್ದರಿಂದ ಗಾರ್ಮೆಂಟ್ ನೌಕರರು ಎರಡು ದಿನಗಳ ಸಂಬಳ ಕಳೆದುಕೊಂಡರು. ಬೆಂಗಳೂರಿನಲ್ಲಿ ಇವೆರಡೂ ಉದ್ಯಮಗಳಲ್ಲಿ ಸುಮಾರು ಹತ್ತು ಲಕ್ಷ ಉದ್ಯೋಗಿಗಳಿದ್ದಾರೆ. ಆರ್ಥಿಕ ಉದಾರೀಕರಣದ ದಿಡ್ಡಿ ಬಾಗಿಲು ತೆರೆದ ಬಳಿಕ ಕಾರ್ಮಿಕರಲ್ಲೂ ಶ್ರೇಣೀಕೃತ ವ್ಯವಸ್ಥೆ ಬೆಳೆದಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ.



ಅಭಿಜಿತ್

ಕಳೆದ ವಾರ ಎರಡು ದಿನಗಳ ಕಾಲ ದೇಶಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಯಿತು. 11 ಕಾರ್ಮಿಕ ಸಂಘಟನೆಗಳು ಒಟ್ಟು ಸೇರಿ 10 ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಡೆಸಿದ ಎರಡು ದಿನಗಳ ಮುಷ್ಕರ ಯಶಸ್ವಿಯಾಯಿತು ಎನ್ನುವುದು ಕಾರ್ಮಿಕ ಸಂಘಟನೆಗಳ ಹೇಳಿಕೆ. ಮುಖ್ಯವಾಗಿ ಆಟೊ ಚಾಲಕರು ಮುಷ್ಕರ ನಡೆಸಿದ್ದು ಮತ್ತು ಶಾಲೆ ಕಾಲೇಜುಗಳು ಬಂದ್ ಆದದ್ದು ಮುಷ್ಕರದ ಯಶಸ್ಸಿನ ಸೂಚನೆ ಎಂದಾದರೆ ಕಾರ್ಮಿಕ ಸಂಘಟನೆಗಳ ಹೇಳಿಕೆ ನಿಜ ಅನ್ನಬಹುದು. ದೇಶಾದ್ಯಂತ ಸಾವಿರಾರು ಉದ್ಯಮಗಳು ಬಾಗಿಲು ಮುಚ್ಚಿದ್ದವು. ಮುಖ್ಯವಾಗಿ ಕಾರ್ಮಿಕ ಕಾಯ್ದೆಯ ವ್ಯಾಪ್ತಿಗೆ ಬರದೇ ಇದ್ದರೂ ಸರ್ಕಾರಿ ವಲಯದ ಎಲ್ಲ ಬ್ಯಾಂಕ್‌ಗಳ ಸಾವಿರಾರು ನೌಕರರು ಮುಷ್ಕರ ಹೂಡಿದ್ದರಿಂದ ಆರ್ಥಿಕ ವಹಿವಾಟು ಅಸ್ತವ್ಯಸ್ತಗೊಂಡಿತು. ದೆಹಲಿಯಲ್ಲಿ ಮತ್ತು ಉತ್ತರ ಪ್ರದೇಶದ ನೊಯಿಡಾದಲ್ಲಿ ಹಿಂಸಾಚಾರದ ಘಟನೆಗಳೂ ನಡೆದವು. ಉದ್ಯಮಗಳ ಪ್ರಾತಿನಿಧಿಕ ಸಂಘಟನೆಯಾದ ಅಸೋಚೆಮ್ ಪ್ರಕಾರ, ಎರಡು ದಿನಗಳ ಮುಷ್ಕರದಲ್ಲಿ ದೇಶದ ಆರ್ಥಿಕತೆಗೆ ಸುಮಾರು 20,000 ಕೋಟಿ ರೂಪಾಯಿಗಳ ನಷ್ಟ ಉಂಟಾಗಿದೆ.

ಇತ್ತೀಚಿನ ದಿನಗಳಲ್ಲೇ ಇದೇ ಮೊದಲ ಬಾರಿಗೆ ಎಂಬಂತೆ, ದೇಶದ 11 ಪ್ರಮುಖ ಕಾರ್ಮಿಕ ಸಂಘಟನೆಗಳು ಒಟ್ಟುಗೂಡಿ ಈ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದ್ದವು. ಅಕ್ಕಿ, ಬೇಳೆ, ಪೆಟ್ರೋಲ್ ಮುಂತಾದ ಆವಶ್ಯಕ ವಸ್ತುಗಳ ಏರಿದ ಬೆಲೆಗಳನ್ನು ಇಳಿಸಬೇಕು, ಕನಿಷ್ಠ ವೇತನವನ್ನು 10 ಸಾವಿರ ರೂಪಾಯಿಗೆ ಏರಿಸಬೇಕು ಮತ್ತು ದೇಶದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಈಗ ತೆರೆದಿರುವ ದಿಡ್ಡಿ ಬಾಗಿಲನ್ನು ಮುಚ್ಚಬೇಕು ಎನ್ನುವುದು ಕಾರ್ಮಿಕ ಸಂಘಟನೆಗಳು ಮುಂದಿಟ್ಟಿದ್ದ ಬೇಡಿಕೆಗಳಲ್ಲಿ ಪ್ರಮುಖವಾದವು. ಎರಡು ದಿನಗಳ ಮುಷ್ಕರದ ಬಳಿಕ ಕೇಂದ್ರ ಸರಕಾರವೇನಾದರೂ ಈ ಬೇಡಿಕೆಗಳನ್ನು ಈಡೇರಿಸಿದೆಯೆ? ಹೋಗಲಿ, ಮುಷ್ಕರದ ಪರಿಣಾಮವಾಗಿ ಪ್ರಧಾನ ಮಂತ್ರಿಗಳು ಕಾರ್ಮಿಕ ಮುಖಂಡರನ್ನು ಮಾತುಕತೆ ನಡೆಸಲು ಕರೆದರೆ? ಎರಡು ದಿನಗಳ ಕಾಲ ದೇಶದ ಆರ್ಥಿಕತೆಗೆ 20 ಸಾವಿರ ಕೋಟಿ ರೂಪಾಯಿ ನಷ್ಟ ಉಂಟು ಮಾಡಿ ನಾವು ಸಾಧಿಸಿದ್ದಾದರೂ ಏನು?

‘ಪ್ರಜಾಪ್ರಭುತ್ವದಲ್ಲಿ ಮುಷ್ಕರ, ಬಂದ್ ಎನ್ನುವುದು ಸಾರ್ವಜನಿಕರ ಸಿಟ್ಟನ್ನು ವ್ಯಕ್ತಪಡಿಸಲು ಹಾಗೂ ಸರಕಾರದ ನಿರ್ಧಾರದ ಮೇಲೆ ಒತ್ತಡ ಹೇರಲು ಪ್ರಮುಖ ಅಸ್ತ್ರ’ ಎನ್ನುವುದೇನೋ ನಿಜವೇ. ಆದರೆ ಈ ಅಸ್ತ್ರಗಳು ತಮ್ಮ ಮೊನಚು ಕಳೆದುಕೊಂಡು ಎಷ್ಟೋ ವರ್ಷಗಳಾಗಿವೆ. ತೈಲೋತ್ಪನ್ನಗಳ ಬೆಲೆ ಏರಿಕೆ, ಅಡುಗೆ ಅನಿಲದ ಮೇಲೆ ನಿಯಂತ್ರಣ ಮುಂತಾದ ಕೇಂದ್ರ ಸರಕಾರದ ನಿರ್ಧಾರಗಳ ವಿರುದ್ಧ ಕಳೆದ ವರ್ಷವೂ ಹೀಗೆಯೇ ಸಾರ್ವತ್ರಿಕ ಬಂದ್ ನಡೆದಿತ್ತು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಸರಕಾರ ತನ್ನ ನಿರ್ಧಾರದಿಂದ ಒಂದಿಂಚೂ ಹಿಂದೆ ಸರಿಯಲಿಲ್ಲ. ಕೇಂದ್ರದಲ್ಲಿ ಯುಪಿಎ ಬದಲಾಗಿ ಎನ್‌ಡಿಎ ಸರಕಾರ ಇದ್ದಿದ್ದರೂ ಪರಿಸ್ಥಿತಿಯಲ್ಲಿ ಅಂತಹ ವ್ಯತ್ಯಾಸವೇನೂ ಆಗುತ್ತಿರಲಿಲ್ಲ ಎನ್ನುವುದು ಜನಸಾಮಾನ್ಯರ ಅರಿವಿಗೂ ಬಂದಿದೆ. ಎಲ್ಲ ರಾಜಕೀಯ ಪಕ್ಷಗಳೂ ತಾವು ಆಳ್ವಿಕೆ ನಡೆಸುತ್ತಿರುವ ರಾಜ್ಯಗಳಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ವಿಫಲವಾಗಿವೆ. ನೇರ ವಿದೇಶಿ ಬಂಡವಾಳದ ಸರಾಗ ಹರಿವಿಗೆ ಸಂಬಂಧಿಸಿ ವಿರೋಧಪಕ್ಷಗಳು ಏನೇ ಕೂಗು ಹಾಕಿದರೂ, ಸದ್ಯದ ಪರಿಸ್ಥಿತಿಯಲ್ಲಿ ಅದಿಲ್ಲದೆ ದೇಶದ ಆರ್ಥಿಕತೆ ಚೇತರಿಸುವುದಿಲ್ಲ ಎನ್ನುವ ಸತ್ಯ ಅವರಿಗೂ ಗೊತ್ತಿದೆ.

ಬೆಂಗಳೂರಿನಲ್ಲಿ ಮುಷ್ಕರದ ದಿನ ಬಸ್‌ಗಳ ಓಡಾಟ ಇದ್ದರೂ ಜನಸಂಚಾರ ತೀರಾ ವಿರಳವಾಗಿತ್ತು. ಹೊರಗೆ ಗಲಾಟೆ ಆಗಬಹುದೆಂಬ ಆತಂಕದಿಂದಲೇ ಹೆಚ್ಚು ಜನರು ರಜೆ ಹಾಕಿ ಮನೆಯಲ್ಲೇ ಉಳಿದುಕೊಂಡರು. ಹೆಚ್ಚು ಸಂಬಳ ಗಳಿಸುವ ಐ.ಟಿ ವಲಯದ ನೌಕರರು ಮುಷ್ಕರದ ದಿನ ಮನೆಯಲ್ಲೇ ಕುಳಿತು ಕೆಲಸ ಮಾಡಿದರು. ಅದೇ ಗಾರ್ಮೆಂಟ್ ಉದ್ಯಮ ಬಾಗಿಲು ಮುಚ್ಚಿದ್ದರಿಂದ ಗಾರ್ಮೆಂಟ್ ನೌಕರರು ಎರಡು ದಿನಗಳ ಸಂಬಳ ಕಳೆದುಕೊಂಡರು. ಬೆಂಗಳೂರಿನಲ್ಲಿ ಇವೆರಡೂ ಉದ್ಯಮಗಳಲ್ಲಿ ಸುಮಾರು ಹತ್ತು ಲಕ್ಷ ಉದ್ಯೋಗಿಗಳಿದ್ದಾರೆ. ಆರ್ಥಿಕ ಉದಾರೀಕರಣದ ದಿಡ್ಡಿ ಬಾಗಿಲು ತೆರೆದ ಬಳಿಕ ಕಾರ್ಮಿಕರಲ್ಲೂ ಶ್ರೇಣೀಕೃತ ವ್ಯವಸ್ಥೆ ಬೆಳೆದಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಮತ ರಾಜಕಾರಣ ಮತ್ತು ಸಂಸತ್ತಿನ ಒಳಗಿನ ವ್ಯೂಹಾತ್ಮಕ ಹೋರಾಟದ ಮೂಲಕ ಸಾಧಿಸಲು ಸಾಧ್ಯವಾಗದ್ದನ್ನು ವಿರೋಧ ಪಕ್ಷಗಳು ಬೀದಿಯಲ್ಲಿ ನಿಂತು ಸಾಧಿಸಲು ಸಾಧ್ಯವಿಲ್ಲ. ಇಂತಹ ಮುಷ್ಕರಗಳಿಂದ ಜನರ ಬಡತನ ಮತ್ತು ಸಂಕಷ್ಟಗಳು ಇನ್ನಷ್ಟು ಹೆಚ್ಚುತ್ತವೆ ಅಷ್ಟೆ. ಇನ್ನು ಮುಂದೆ ಸಾರ್ವತ್ರಿಕ ಮುಷ್ಕರಗಳ ಕರೆ ಕೊಡುವವರು ಈ ಬಗ್ಗೆ ಯೋಚಿಸಲಿ.

■ ಬಿ.ಎಂ.ಹನೀಫ್